MVC-14/2021
PW-1

ದಿನಾಂಕ 10.02.2023 ರಂದು ಸಾಕ್ಷಿಯನ್ನು ಪನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟಿ ಸವಾಲುಃ ಶ್ರೀ ಎ ಆರ್ ಜೆ 1 ನೆ ಎದುರುದಾರ ಪರ ವಕೀಲರಿಂದಃ**

ನಾನು 10 ನೆ ತರಗತಿವರೆಗೆ ಓದಿರುತ್ತೇನೆ. ನನ್ನ ಜನನ ದಿನಾಂಕ 01.06.1991 ಎಂದು ನನ್ನ ಎಸ್ ಎಸ್ ಎಲ್ ಸಿ ದಾಖಲೆಯಲ್ಲಿ ನಮೂದಾಗಿದೆ. ನನಗೀಗ 32 ವರ್ಷ ಚಾಲ್ತಿಯಲ್ಲಿದೆ ಎಂದರೆ ನಿಜ. ನನ್ನ ಹೆಸರು ಸುರೇಶ ಅಂತಾ ಆಧಾರ ಕಾರ್ಡ ಹಾಗೂ ಚಾಲನಾ ಪರವಾನಿಗೆ ಪತ್ರದಲ್ಲಿ ನಮೂದಾಗಿದೆ ನನ್ನ ಹೆಸರಿನ ಸ್ಪೆಲಿಂಗ ಇಂಗ್ಲಿಷನಲ್ಲಿ SURESH ಆಗಿದೆ. ನನ್ನನ್ನು ಸುರೇಶ ಎನ್ನುವ ಹೆಸರಿನಿಂದ ಮಾತ್ರ ಕರೆಯುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮರೆಪ್ಪ ಎಂದೂ ಕರೆಯುತ್ತಾರೆ. ಮರೆಪ್ಪ ಅಂತಾ ನನ್ನ ಹೆಸರಿನಲ್ಲಿರುವ ದಾಖಲೆ ನನ್ನ ಹತ್ತಿರ ಇಲ್ಲ. ಸದರಿ ಮರೆಪ್ಪ ಹೆಸರಿನ ಇಂಗ್ಲೀಷನಲ್ಲಿ ಸ್ಪೆಲಿಂಗ MARYAPPA ಆಗಿದೆ. ಸದರಿ Maryappa ಹೊರತುಪಡಿಸಿ ಬೇರೆ ಏನು ಕರೆಯುವುದಿಲ್ಲ. ನನ್ನ ಅಡ್ಡ ಹೆಸರು ಸನದಿ. ನನ್ನ ಅಡ್ಡ ಹೆಸರು ಸನದಿ ಎನ್ನುವುದನ್ನು ಹೊರುಪಡಿಸಿ ಬೇರೆ ಅಡ್ಡ ಹೆಸರಿಲ್ಲ. ಪೋಲಿಸರಿಗೆ ನಾನು ಕೂಲಿ ಮಾಡುತ್ತೇನೆ ಅಂತಾ ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿ ಕಾರ್ಮಿಕರ ಗುತ್ತೆದಾರ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಕೆಎ–32/ಇಜೆ–8864 ರ ದ್ವಿ ಚಕ್ರ ವಾಹನ ನನ್ನ ಸ್ನೇಹಿತ ಚಂದಪ್ಪ ಸನದಿರವರದ್ದು.

ನಾನು ನನ್ನ ಸ್ನೇಹಿತ ಚಂದಪ್ಪರವರಿಗೆ ಸೇರಿದ ದ್ವಿಚಕ್ರ ವಾಹನದ ಮೇಲೆ ಹೋಗುತ್ತಿದ್ದೆ ಅಂತಾ ನನ್ನ ಸಾಕ್ಷಿ ಪ್ರಮಾಣ ಪತ್ರ ಹಾಗೂ ಅರ್ಜಿಯಲ್ಲಿ ನಮೂದಿಸಿಲ್ಲ ನಾನು ಆ ದಿನ ನಾನು ಚಂದ್ರಪ್ಪರವರ ದ್ವಿ ಚಕ್ರ ವಾಹನವನ್ನು ತೆಗೆದುಕೊಂಡು ಹೋಗಿಲ್ಲ ಹಾಗೂ ನನಗೆ ಯಾವುದೆ ಅಪಘಾತಗಿಲ್ಲ ಎಂದರೆ ಸರಿಯಲ್ಲ. ನಮ್ಮ ಅನುಕೂಲಕ್ಕಾಗಿ ಚಂದಪ್ಪರವರ ವಾಹನದ ಮೇಲೆ ಹೋಗುತ್ತಿದ್ದೆ ಅಂತಾ ಹೇಳಿ ವಾಹನ ನಂ.ಕೆಎ–32/ಇಜೆ–8864 ರ ಮೇಲೆ ಹೋಗುತ್ತಿದ್ದೆ ಎಂದು ಸುಳ್ಳು ವಿಚಾರ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಹೆಬ್ಬಟ್ಟನ್ನು ಒತ್ತಿ ಮರೆಪ್ಪ @ ಸುರೇಶ ಅಂತಾ

ಬರೆಸಿರುತ್ತೇನೆ ಎಂದರೆ ಸಾಕ್ಷಿ ನಾನು ಸಹಿ ಮಾಡುತ್ತೇನೆ ಅಂತಾ ಮೊದಲಿಗೆ ನುಡಿದಿದ್ದು ಆನಂತರ ಸಾಕ್ಷಿ ನಾನು ಆ ದಿನ ಆಸ್ಪತ್ರೆಯಲ್ಲಿ ಮಲಗಿದ್ದೆ ಕೈ ಏಳುತ್ತಿರಲಿಲ್ಲ ಆದ ಕಾರಣ ಹೆಬ್ಬೆಟ್ಟಿನ ಗುರುತು ಹಾಕಿರುತ್ತೇನೆ. ನನ್ನ ಕೈ ಏಳುತ್ತಿರಲಿಲ್ಲ ಎಂದು ನಿಪಿ-1 ರಲ್ಲಿ ಪೋಲಿಸರು ಎಲ್ಲಿಯೂ ನಮೂದಿಸಿಲ್ಲ ಎಂದರೆ ಪೋಲಿಸರೆ ದೂರನ್ನು ಬರೆದುಕೊಂಡು ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ದೂರು ನೀಡುವ ಸಮಯದಲ್ಲಿ ಕೈ ಏಳುತ್ತಿರಲಿಲ್ಲ ಎಂದು ನಮೂದಿಸಿಲ್ಲ ಎಂದರೆ ನಿಜ.

ಹೆಚ್ಚಿಗೆ ಪರಿಹಾರ ಧನ ಪಡೆಯುವ ಉದ್ದೇಶದಿಂದ ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಕಡಿಮೆ ವಯಸ್ಸು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-10 ರಿಂದ 12, 14 ರಿಂದ 16, 23, 27, 28, 30 ರಿಂದ 32, 35 ರಿಂದ 38, 40 ರಿಂದ 56, 61, 62, 67, 71 ರಿಂದ 87, 94 ರಿಂದ 97, 100 ರಿಂದ 113, 116 ರ ದಾಖಲೆಗಳು ನನಗೆ ಸಂಬಂಧಿಸಿದ್ದಲ್ಲ ಅವು ಬೇರೆಯವರಿಗೆ ಸಂಬಂಧಿಸಿದ್ದು ಎಂದರೆ ಸಾಕ್ಷಿ ಮರೆಪ್ಪ ಎಂದರೆ ನಾನೆ ಎಂದು ನುಡಿಯುತ್ತಾರೆ. ನಿಪಿ-118, 120 ರಿಂದ 123, 126, 129, 130 ನನಗೆ ಸಂಬಂಧಿಸಿದ್ದಲ್ಲ ಬೇರೆಯವರಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ನಿಪಿ-135 ರ ದಾಖಲೆ ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಿಪಿ-66 ಮತ್ತು 69 ರಲ್ಲಿ ಎಲ್ಲಿಯೂ ಕೂಡ ನನ್ನ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ.

ಕಾಮರೆಡ್ಡಿ ಆಸ್ಪತ್ರೆ ಹೊರತುಪಡಿಸಿ ಬೇರೆ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದಿಲ್ಲ. ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾಹನ ಚಾಲನೆ ಕೆಲಸ ಹಾಗೂ ವ್ಯವಸಾಯ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೆ ಅಪಘಾತವಾಗಿರದಿದ್ದರೂ ಸಹ ಪೋಲಿಸರೊಂದಿಗೆ ಶಾಮೀಲಾಗಿ ನನ್ನ ಸ್ನೇಹಿತನಿಗೆ ಸೇರಿದ ವಾಹನದ ಮೇಲೆ ಹೋಗುತ್ತಿದ್ದೆ ಅಂತಾ ಹೇಳಿ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗ ನ್ಯೂನ್ಯತೆ ಪ್ರಮಾಣ ಪತ್ರವನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾಹನ ಚಾಲಾ ಪರವಾನಿಗೆ ಪತ್ರ ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಜೇವರ್ಗಿ